

# ಕಬ್ಬಿನ ಸಿಹಿ ಕಳ್ಳ ವಿಮಾನ ಕೀಟ

**ಕಬ್ಬಿನ ಎಲೆಗಳಿಂದ ರಸ ಹೀರಿ ದುರ್ಬಲಗೊಳಿಸುವ ವಿಮಾನ ಕೀಟ, ರೈತರಿಗೆ ಉಪದ್ರವಿ.**

■ ಶಶಿಧರಸ್ವಾಮಿ ಆರ್. ಹಿರೇಮಠ

ನೋಡಲು ವಿಮಾನದ ರಚನೆಯನ್ನೇ ಹೋಲುವ ಕಾರಣಕ್ಕೋ ಏನೋ ಈ ಕೀಟಕ್ಕೆ 'ವಿಮಾನ ಕೀಟ' ಎಂಬ ಹೆಸರು. ವಿಶೇಷ ದೇಹ ರಚನೆ, ಬಣ್ಣದ ಸಂಯೋಜನೆಯಿಂದ ಗಮನಸೆಳೆಯುವ ಈ ಕೀಟ – ಕಬ್ಬು, ಜೋಳ, ರಾಗಿ, ಅಕ್ಕಿ, ಬಾರ್ಲಿ, ಓಟ್ಸ್, ಬೇಳೆಕಾಳು ಬೆಳೆಗಳು, ಸಿರಿಧಾನ್ಯಗಳು ಮತ್ತು ಕಾಡುಹುಲ್ಲುಗಳ ಬೆಳೆಗಳಿಗೆ ಉಪದ್ರವಿ.

'ವಿಮಾನ ಕೀಟ'ವನ್ನು 'ಕಬ್ಬಿನ ಎಲೆಕೊರಕ' ಎಂದೂ ಕರೆಯುತ್ತಾರೆ. ಇಂಗ್ಲಿಷಿನಲ್ಲಿ ಏರೋ ಪ್ಲೇನ್ ಬಗ್ ಅಥವಾ ಶುಗರ್‌ಕೇನ್ ಲೀಫ್ ಹಾಪರ್ ಎಂದು ಕರೆದು, ವೈಜ್ಞಾನಿಕವಾಗಿ ಪಿರಿಲ್ಲಾ ಪೆರ್ಪುಸಿಲ್ಲಾ (**Pyrilla perpusilla**) ಎಂದು ಹೆಸರಿಸಲಾಗಿದೆ. ಸಂಧಿಪದಿಗಳ ಕೀಟ ವರ್ಗದ, ಅರ್ಧಪಕ್ಷೀಯ (ಅರ್ಧರೆಕ್ಕೆಗಳ) ಹೆಮಿಪ್ಟೆರಾ ಗಣಕ್ಕೆ ಈ ಕೀಟವನ್ನು ಸೇರಿಸಲಾಗಿದೆ.

ವಯಸ್ಕ ವಿಮಾನ ಕೀಟವು ಮಸುಕಾದ ಕಂದು–ಹಳದಿ ವರ್ಣದ ಮೃದು ದೇಹ ಹೊಂದಿದ್ದು, ಮುಂದಕ್ಕೆ ಚಾಚಿದಂಥ ಬಾಯಿ ಹೊಂದಿರುತ್ತದೆ. ಈ ಮೂತಿಯಿಂದ ಬೆಳೆಗಳಿಗೆ ಚುಚ್ಚಿ ರಸವನ್ನು ಹೀರುತ್ತದೆ. ಮುಂಭಾಗದ ರೆಕ್ಕೆಗಳು ಹಳದಿ ಕಂದು ಬಣ್ಣದೊಂದಿಗೆ ಅರೆ ಪಾರದರ್ಶಕವಾಗಿರುತ್ತವೆ. ಹಿಂಭಾಗದ ರೆಕ್ಕೆಗಳು ಲಘುವಾಗಿ ಕಪ್ಪು ಚುಕ್ಕೆಗಳಿಂದ ಮುಚ್ಚಿಕೊಂಡಿರುತ್ತವೆ. ಪ್ರೌಢ ಮತ್ತು ಅಪ್ಸರೆ(ಮರಿಹುಳು)ಗಳೆರಡೂ ಸಕ್ರಿಯವಾಗಿದ್ದು, ಸಕ್ಕರೆಯನ್ನು ನೀಡುವ ಕಬ್ಬಿನ ಎಲೆಗಳಿಂದ ರಸವನ್ನು ಅಕ್ಕರೆಯಿಂದ ಹೀರುತ್ತವೆ. ಸಣ್ಣದೊಂದು ತೊಂದರೆ ಕಂಡುಬರುತ್ತಿದ್ದಂತೆ ಎಲೆಯಿಂದ ಎಲೆಗೆ ಜಿಗಿಯುತ್ತವೆ.

ವಿಮಾನ ಕೀಟ ಬೆಳೆಗಳ ಎಲೆಗಳಿಂದ ರಸ ಹೀರುವುದರಿಂದ ಸಸ್ಯವನ್ನು ದುರ್ಬಲಗೊಳಿಸುತ್ತದೆ ಮತ್ತು ಸುಕ್ರೋಸ್ ಅಂಶವನ್ನು ಶೇ. 50ರಷ್ಟು ಕಡಿಮೆ ಮಾಡುತ್ತದೆ. ಇವುಗಳು ಹನಿಡ್ಯೂ ಎಂಬ ಸಿಹಿ ಜಿಗುಟಾದ ದ್ರವವನ್ನು ಹೊರಹಾಕುವುದರಿಂದ ಇದು ಕ್ಯಾಪ್ನೋಡಿಯಮ್ ಎಂಬ ಜಾತಿ ಶಿಲೀಂಧ್ರದ ತ್ವರಿತ ಬೆಳವಣಿಗೆಯನ್ನು ಉತ್ತೇಜಿಸಿ ಮಸಿ ಅಚ್ಚಿನಿಂದ ಕಾಡಿಗೆಯಂತಾಗಿ ಎಲೆಗಳನ್ನು ಸಂಪೂರ್ಣವಾಗಿ ಆವರಿಸುತ್ತದೆ. ಇದರಿಂದ ದ್ಯುತಿಸಂಶ್ಲೇಷಣೆಯ ಮೇಲೆ ಪರಿಣಾಮ ಬೀರಿ ಇಳುವರಿಯೂ ಕುಠಿತವಾಗುತ್ತದೆ.

ಹೆಣ್ಣು ವಿಮಾನ ಕೀಟ ನೆರಳು ಮತ್ತು ಮರೆಮಾಚುವ ಭಾಗದಲ್ಲಿರುವ ಸಸ್ಯಗಳ ಎಲೆಗಳ ಕೆಳಭಾಗದ ಮಧ್ಯನಾಳದ ಬಳಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳನ್ನು 30–40 ಸಮೂಹ(ಗುಚ್ಛ)ದಲ್ಲಿ 4–5 ಸಾಲುಗಳಲ್ಲಿ ಇಟ್ಟು ಅವುಗಳಿಗೆ ಮಸುಕಾದ ಮೇಣದಂಥ ವಸ್ತುಗಳಿಂದ ಮುಚ್ಚುತ್ತವೆ. ಮೊಟ್ಟೆಗಳು ಅಂಡಾಕಾರದಲ್ಲಿದ್ದು ಇಟ್ಟಾಗ ತೆಳು ಬಿಳಿ ಬಣ್ಣ ಇರುತ್ತದೆ. ಆನಂತರ ನೀಲಿ–ಹಸಿರಾಗಿ, ಮೊಟ್ಟೆಯೊಡೆಯುವ ಮೊದಲು ಕಂದು ಬಣ್ಣಕ್ಕೆ ತಿರುಗುತ್ತವೆ. ಹೆಣ್ಣು ತನ್ನ ಜೀವಿತಾವಧಿಯಲ್ಲಿ 600ರಿಂದ 800 ಮೊಟ್ಟೆಗಳನ್ನು ಇಡುತ್ತದೆ.

ಮೊಟ್ಟೆಯಿಂದ ಹೊರಬಂದ ಮರಿಹುಳುಗಳು ಪೊರೆ ಕಳಚುವಿಕೆಯಿಂದ ಐದು ಹಂತಗಳಲ್ಲಿ ಬೆಳೆವಣಿಗೆಯನ್ನು ಹೊಂದಿ ಪ್ರೌಢಾವಸ್ಥೆಗೆ ತಲುಪುತ್ತವೆ.

ಐದನೇ ಹಂತದಿಂದ ಪೊರೆ ಕಳಚಿದ ವಯಸ್ಕ ಕೀಟವು ಬಿಳಿ ಬಣ್ಣವನ್ನು ಹೊಂದಿ ನಂತರ ಅದರ ದೇಹ ಒಣಹುಲ್ಲಿನ ಬಣ್ಣಕ್ಕೆ ತಿರುಗುತ್ತದೆ. ಕಣ್ಣುಗಳು ತೆಳು ಹಸಿರು ಬಣ್ಣಕ್ಕೆ ತಿರುಗುತ್ತವೆ ಮತ್ತು ತಲೆ ಹಿಂಭಾಗದಲ್ಲಿ ಕಪ್ಪು ಚುಕ್ಕೆಯೊಂದಿಗೆ ಮೂತಿಯನ್ನು ವೃದ್ಧಿಸಿಕೊಳ್ಳುತ್ತದೆ. ವಯಸ್ಕ ಹೆಣ್ಣು ವಿಮಾನ ಕೀಟ 10 ಎಂ.ಎಂ. ಉದ್ದ ಮತ್ತು 2.2 ಎಂ.ಎಂ. ಅಗಲದ ಗಾತ್ರದವರೆಗೂ ಬೆಳೆಯುತ್ತವೆ. ಗಂಡು ಹೆಣ್ಣಿಗಿಂತ ಸಣ್ಣ ಗಾತ್ರದಲ್ಲಿದ್ದು, 8 ಎಂ.ಎಂ. ಉದ್ದ ಮತ್ತು 3.5 ಎಂ.ಎಂ. ಅಗಲದ ಗಾತ್ರದಲ್ಲಿರುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**